



●ರಾಯಚೂರಿನ ಪೊಲೀಸ್ ಕಾಲೋನಿಯ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಕುಮಾರಿ ಸಂಧ್ಯಾ ಹಾಗೂ ರಾಯಚೂರಿನ ಲಾಲ್‌ಬಹದ್ದೂರ್ ಶಾಸ್ತ್ರೀ ನಗರದ ಸುಮಾ ಕ್ಷೀರಭಾಗ್ಯ ಯೋಜನೆಯ ಫಲಾನುಭವಿಗಳು. ಮೂರು ದಿನ ಮೇಡಂ ಕೊಡುವ ಬಿಸಿ ಹಾಲನ್ನು ಸಂತೋಷದಿಂದ ಕುಡಿಯುವುದಾಗಿ ಹೇಳಿಕೊಂಡರು.

●ವಿಜಯಪುರದ (ಬಿಜಾಪುರ) ಸತೀಶ್ ಮತ್ತು ಶಬ್ಬೀರ್ ಲಿಂಗತ್ವ ಅಲ್ಪ ಸಂಖ್ಯಾತರು. ಮೈತ್ರಿ ಯೋಜನೆ ಜಾರಿಗೆ ಬಂದಮೇಲೆ ನಾವು ಮುಖ್ಯ ವಾಹಿನಿಗೆ ಬರುವಂತಾಗಿದ್ದೇವೆ. ಸರ್ಕಾರ ನೀಡುತ್ತಿರುವ ಪ್ರಾಥಮಿಕ ಸೌಲಭ್ಯ ಸಂತಸ ತಂದಿದೆಯಾದರೂ ಇನ್ನೂ ಹೆಚ್ಚಿನ ಸೌಲಭ್ಯ ನೀಡಲಿ ಎಂಬುದು ನಮ್ಮ ಆಶಯ ಎಂದರು.

●ಬಾಗಲಕೋಟೆ ಜಿಲ್ಲೆಯ ಶಿರಸೂರು ಗ್ರಾಮದ ರೈತ ಶ್ರೀ ಬಸಲಿಂಗಪ್ಪ ಗುಗ್ಗಿ ಅವರು ಹೇಳಿದ್ದು ಹೀಗೆ "ನಮ್ಮ ಭಾಗದಲ್ಲಿ ಕಳೆದ ಎರಡು ವರ್ಷಗಳಿಂದ ಮಳೆ ಇಲ್ಲ. ಸಂಕಷ್ಟದಲ್ಲಿದ್ದೆವು. ಕೃಷಿ ಹೊಂಡದಿಂದಾಗಿ ನಮ್ಮ ಜಮೀನು ಹಸನಾಯಿತು. ಉತ್ತಮ ಬೆಳೆ ತೆಗೆದು ನೆಮ್ಮದಿಯ ಬದುಕಿಗೆ ದಾರಿಯಾಯಿತು. ಗ್ರಾಮಕ್ಕೊಂದು ಕೃಷಿ ಹೊಂಡದ ಬದಲು ರಾಜ್ಯದ ಎಲ್ಲ ರೈತರ ಜಮೀನುಗಳಲ್ಲೂ ಕೃಷಿ ಹೊಂಡ ಮಾಡಿದರೆ ಸರ್ಕಾರ ರೈತರಿಗೆ ಇದಕ್ಕಿಂತ ಒಳ್ಳೇ ಭಾಗ್ಯ ನೀಡಲು ಸಾಧ್ಯವಿಲ್ಲ". ಎಂದರು.

●ಯಲಬುರ್ಗಾದ ತಹಕಲ್ ಗ್ರಾಮದ ಸಿದ್ದನಗೌಡ ತೋಟಯ್ಯ ಅವರು ಕೃಷಿ ಭಾಗ್ಯದಿಂದ ನಮಗೆ ಅನುಕೂಲವಾಗಿದೆ. "ಎಲ್ಲ ಭಾಗ್ಯಗಳಿಗಿಂತ ಇದು ಹೆಚ್ಚಿನ ಭಾಗ್ಯ ತಂದು ಕೊಟ್ಟಿದೆ. ಸರ್ಕಾರವು ಇನ್ನೂ ಒಂದು ಸಾವಿರ ಹೊಂಡ ನಮ್ಮಲ್ಲಿ ತೆಗೆಯುವ ಯೋಜನೆ ಇಟ್ಟುಕೊಂಡಿದೆ. ಈ ಯೋಜನೆಯಿಂದ ಭೂಮಿ ತಂಪಾಗುವುದಲ್ಲದೆ ಅಂತರ್ಜಲವು ಅಭಿವೃದ್ಧಿಯಾಗಲಿದೆ ಎಂದರು.

●ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯ ಆದರ್ಶ ಎಂಬ ವಿದ್ಯಾಸಿರಿ ಫಲಾನುಭವಿ ಹಾಸ್ಟೆಲ್‌ನಲ್ಲಿ ಸ್ಥಳ ದೊರೆಯಲಿಲ್ಲ. ನನ್ನ ಶಿಕ್ಷಣದ ಭವಿಷ್ಯ ಚಿಂತೆಗೀಡುಮಾಡಿತ್ತು. ವಿದ್ಯಾಸಿರಿ ಯೋಜನೆಯಿಂದಾಗಿ ಇಂದು ನೆಮ್ಮದಿಯಿಂದ ವಿದ್ಯಾಭ್ಯಾಸ ಮಾಡುತ್ತಿದ್ದೇನೆ ಎಂದರು.

●ಕೊಪ್ಪಳದ ಮಲ್ಲಪ್ಪ ಹಿರೇಸಿಂಧೋಗಿ ಅವರು ಕ್ಷೀರಧಾರೆಯ ಫಲಾನುಭವಿಗಳು. ಪ್ರೋತ್ಸಾಹಧನ ೪ ರೂ. ಏರಿಸಿರುವುದರಿಂದ ರೈತ ಕುಟುಂಬಗಳ ಆರ್ಥಿಕ ಸ್ಥಿತಿ ಸುಧಾರಿಸಿದೆ. ರಾಜ್ಯದಲ್ಲಿ ಹೈನುಗಾರಿಕೆಗೆ ಇನ್ನೂ ಹೆಚ್ಚು ಪ್ರೋತ್ಸಾಹ ನೀಡಿ, ಪ್ರೋತ್ಸಾಹಧನವನ್ನು ಇನ್ನೂ ೨ ರೂ. ಹೆಚ್ಚಿಸಿದಲ್ಲಿ ರೈತರಿಗೆ ಇನ್ನೂ ನೆಮ್ಮದಿ ತರುವುದು ಎಂದರು.

●ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಮುರಗೋಡಿನ ಶಿವಾನಂದ ಕುಂಬಾರ ಅವರು ಹಿಂದುಳಿದ ವರ್ಗದವರಿಗಾಗಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ೩೦,೦೦೦/ ರೂ.ಗಳ ಸಾಲದ ನೆರವು ನೀಡಿದೆ. ನಶಿಸುತ್ತಿರುವ ಕುಂಬಾರಿಕೆ ಉಳಿಸಿ ಬೆಳೆಸುವ ಯತ್ನದಲ್ಲಿ ಸರ್ಕಾರವು ಪ್ರೋತ್ಸಾಹ ನೀಡಿದೆ. ನನಗೆ ನೀಡಿದ ಸಾಲ ಮನ್ನಾ ಮಾಡಿದ ಪರಿಣಾಮವಾಗಿ ಇಂದು ನಾನು ಹೆಚ್ಚು ಅಭಿವೃದ್ಧಿ ಹೊಂದಿದ್ದೇನೆ ಎಂದರು.

●ಗದಗದ ವೆಂಕಟೇಶ್ ತಿಪ್ಪಣ್ಣ ರಾಂಪೂರ ಅವರು ಶ್ರಮ ಶಕ್ತಿ ಯೋಜನೆಯಡಿ ಕುಶಲ ಕರ್ಮಿಯಾಗಿ ತಲೆ ತಲಾಂತರದಿಂದ ಬಂದಿದ್ದ ಕ್ಷೌರಿಕ ವೃತ್ತಿಯನ್ನು ಆಧುನಿಕ ಕಾಲಕ್ಕೆ ತಕ್ಕಂತೆ ನವೀಕರಿಸಿಕೊಳ್ಳಲು ದೇವರಾಜ ಅರಸು ಅಭಿವೃದ್ಧಿ ನಿಗಮದಿಂದ ೩೦,೦೦೦ ರೂ.ಗಳ ಸಾಲ ಪಡೆದು ಈಗ ಅಭಿವೃದ್ಧಿ ಹೊಂದಿದ್ದಾರೆ. ಸಾಲವು ಮನ್ನಾವಾಗಿದೆ. ಇಂದು ಅವರ ಮುಖದಲ್ಲಿ ಸಂತಸದ ನಗು ಕಾಣುತ್ತಿದೆ.

●ಚಿಕ್ಕಬಳ್ಳಾಪುರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕು ಭೈರಸಂದ್ರದ ಮಂಜುಳಾ ಅವರು ಮನಸ್ವಿನಿ ಯೋಜನೆಯ ಫಲಾನುಭವಿ. 'ಈ ಯೋಜನೆಯಿಂದ ನನಗೆ ಬಹಳ ಉಪಯುಕ್ತವಾಗಿದೆ. ಮಾಸಿಕ ೫೦೦ರೂ ಮೊತ್ತವನ್ನು ೧೦೦೦ ರೂಗೆ ಹೆಚ್ಚಿಸಿದರೆ ಇನ್ನೂ ಅನುಕೂಲವಾಗುತ್ತದೆ. ಸರ್ಕಾರದಿಂದ ಇನ್ನೂ ಸವಲತ್ತುಗಳು ಬೇಕಿವೆ' ಎಂದರು

●ಬಾಗೇಪಲ್ಲಿಯ ಗಂಟವಾರಂಪಲ್ಲಿಯ ವರದಾದ್ರಿ ಪಿಯು ಕಾಲೇಜಿನಲ್ಲಿ ೨ನೇ ಪಿಯುಸಿ ವ್ಯಾಸಂಗ ಮಾಡುತ್ತಿರುವ ಜಸ್ವಂತ್ ಅವರು ವಿದ್ಯಾಸಿರಿ ಫಲಾನುಭವಿ. ವಿದ್ಯಾಸಿರಿಯಿಂದ ವರ್ಷಕ್ಕೆ ೧೩,೫೦೦ರೂಪಾಯಿಗಳ ಸ್ಕಾಲರ್‌ಶಿಪ್ ನನಗೆ ಸಿಗುತ್ತಿದೆ ಎಂದು ಹರ್ಷ ವ್ಯಕ್ತಪಡಿಸಿದ್ದಾನೆ. ಮುಂದೆ ಹೆಚ್ಚಿನ ವ್ಯಾಸಂಗ ಮಾಡುವ ಗುರಿ ಸಹ ಹೊಂದಿದ್ದಾನೆ. ■

ಸುಮಾರು ೨೫೦ ಜನ ಇವರ ಸಮುದಾಯದವರಿದ್ದಾರೆ. ನಿಸರ್ಗ ಸ್ವಯಂ ಸೇವಾ ಸಂಸ್ಥೆಯಲ್ಲಿ ಇವರು ಕೆಲಸ ಮಾಡುತ್ತಾರೆ. ಹಾಗೆಯೇ ಸ್ವಾವಲಂಬನೆಯನ್ನು ಇಷ್ಟಪಡುವ ಅನಿಲ್, ನರ್ಸಿಂಗ್ ಹೋಮ್ ಒಂದರಲ್ಲಿ ಕಾರ್ಯ ನಿರ್ವಹಿಸುತ್ತಾರೆ.

ಮೊದಲು ಹೊಟ್ಟೆಪಾಡಿಗಾಗಿ ಲೈಂಗಿಕ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದು, ಈಗ ನಿಸರ್ಗ ಸ್ವಯಂಸೇವಾ ಸಂಸ್ಥೆಯಲ್ಲಿ ತೊಡಗಿಸಿಕೊಂಡಿರುವ ಚಿಕ್ಕಬಳ್ಳಾಪುರದ ರಾಜುರಮ್ಮಾ ಅವರದ್ದೂ ಹೆಚ್ಚು ಕಡಿಮೆ ಇದೇ ಸ್ಥಿತಿ. "ನನಗೆ ಸುಮಾರು ಎಂಟು ವರ್ಷವಿದ್ದಾಗ ಈ ಸಮಸ್ಯೆ ಗೊತ್ತಾಯಿತು. ಸ್ವಂತ ಅಮ್ಮ ಅಪ್ಪನೇ ಕಿರುಕುಳ ನೀಡಿ ಮನೆಯಿಂದ ಹೊರ ಹಾಕಿ ಬಿಟ್ಟರು. ಆದರೆ ಸರ್ಕಾರ ನಮ್ಮ ಕೈ ಹಿಡಿಯಿತು ನೋಡಿ. ಯೋಜನೆ ಜಾರಿಮಾಡಿದ ಮುಖ್ಯಮಂತ್ರಿಗಳನ್ನು ದೇವರು ಚೆನ್ನಾಗಿಟ್ಟಿರಲಿ. ನಾನು ಸರ್ಕಾರ ನೀಡುತ್ತಿರುವ ಮೈತ್ರಿ ಮಾಸಾಶನದ ಫಲಾನುಭವಿಯಾಗಿದ್ದೇನೆ. ಸರ್ಕಾರ ನಮ್ಮ ಸಮುದಾಯದವರಿಗೆ ತಿಂಗಳಿಗೆ ೫೦೦ ರೂಪಾಯಿ ಕೊಡುತ್ತೆ' ಎನ್ನುತ್ತಾರೆ ಅವರು.